ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬೃ.ಬೆಂ.ಮ.ಪಾ/ಜಂ.ಆ/ಯ.ವ/ಆ.ಅ/799 /2012-13.

ಜಂಟಿ ಆಯುಕ್ತರವರ ಕಛೇರಿ
ಯಲಹಂಕ ವಲಯ ,ಬೃ.ಬೆಂ.ಮ.ಪಾ.
ಬೆಂಗಳೂರು -92 ದಿನಾಂಕ: 7.1.13

ಆಡಳಿತಾತ್ಮಕ ಅನುಮೋದನೆ

ವಿಷಯ:- Providing and Asphalting to Road at Shabarinagarr in Ward No06 Byatarayanapura Sub Division.

ಉಲ್ಲೇಖ:- ಮುಖ್ಯ ಲೆಕ್ಕಾಧಿಕಾರಿ ರವರ ಕಛೇರಿ ಕಾಮಗಾರಿ ಸಂಕೇತ :

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ ವಿಭಾಗ) ರವರು **2012-13**ನೇ ಸಾಲಿನ **ಕೆ.ಪಿ.ಡಬ್ಲ್ಯೂ.ಡಿ. ಎಸ್.ಆರ್,** ದರಪಟ್ಟಿಯನ್ವಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಲಹಂಕ ವಲಯ ವಾರ್ಡ್ ಸಂಖ್ಯೆ 06 ರಲ್ಲಿ 2012-13ನೇ ಸಾಲಿನ **ಪಿ.ಓ.ಡಬ್ಲೂ ರ ಅನುದಾನದಡಿಯಲ್ಲಿ** ಮೇಲ್ಕಂಡ ಕಾಮಗಾರಿಯನ್ನು ಕೈಗೊಳ್ಳಲು **ರೂ, 19.00 ಲಕ್ಷ**ಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಆಡಳಿತಾತ್ಮಕ ಮಂಜೂರಾತಿಗಾಗಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಗೆ ಮಾನ್ಯ ಆಯುಕ್ತರವರು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ ಹಾಗೂ ಸದರಿ ಕಾಮಗಾರಿಯನ್ನು ಮಾನ್ಯ ಆಯುಕ್ತರವರು ಆದೇಶ ಸಂಖ್ಯೆ:ಮು.ಆ.ಅ/ಜೆಮ್ರ್/ಕಾ.ಸಂ.ಕೋ/ಪಿ.ಆರ್/513/12-13 ದಿನಾಂಕ:14.08.2012 ರಲ್ಲಿ ನೀಡಿರುವ ಅಧಿಕಾರದನ್ವಯ ಸದರಿ ಕಾಮಗಾರಿಗೆ ಕೆಳಗಿನ ಷರತ್ತುಗಳನ್ವಯ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ ಹಾಗೂ ಆಡಳಿತಾತ್ಮಕ ಅನುಮೋದನೆ ಪುಸ್ತಕ ಪುಟ ಸಂಖ್ಯೆ238 ಕ್ರ.ಸಂ799 ರಲ್ಲಿ ಈ ಕೆಳಗಿನ ಷರತ್ತುಗಳಂತೆ ದಾಖಲಿಸಲಾಗಿದೆ.

ಷರತ್ತುಗಳು:

1. ಅಂದಾಜು ಪಟ್ಟಿಯ ಮೊತ್ತ ರೂ 2.00 ಲಕ್ಷಗಳಿಗೆ ಮೀರಿದ ಕಾಮಗಾರಿಗಳಿಗೆ ಟೆಂಡರ್ ಕರೆಯುವುದು.
2. ರಸ್ತೆ ಇತಿಹಾಸ ಪುಸ್ತಕದಲ್ಲಿ (Road History book/Register) ಈ ಕೆಲಸದ ವಿವರಗಳನ್ನು ದಾಖಲಿಸಿ ಕ್ರಮಬದ್ದಗೊಳಿಸುವುದು.
3. ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಅನುಮೋದನೆ ಪಡೆಯುವುದು.
4. ಆರ್.ಸಿ.ಸಿ ಡೆಕ್‌ಸ್ಲಾಬ್, ಹರಿನೀರು ಮೋರಿಯ ಆಸರೆಗೋಡೆ ಮತ್ತು ಸೇತುವೆ ಕೆಲಸಗಳ ನಿರ್ವಹಣೆಗೆ ಮೊದಲು ವಿನ್ಯಾಸಕ್ಕೆ ಅನುಮೋದನೆ ಪಡೆಯುವುದು.
5. ಮೇಲಿನ ಕೆಲಸದ ವೆಚ್ಚವನ್ನು ಉಪ ಅನುದಾನದಡಿಯಲ್ಲಿ ಭರಿಸುವುದು.
6. ಬಿ.ಎಂ./ಬಿ.ಸಿ. ಅಳವಡಿಸಿಕೊಂಡಿರುವ ರಸ್ತೆಗಳಿಗೆ 'ನಿಯಮಾನುಸಾರ ಪರೀಕ್ಷೆಗಳನ್ನು ಕೈಗೊಂಡು ಫಲಿತಾಂಶದ ವರದಿಗಳನ್ನು ಪಡೆದುಕೊಳ್ಳುವುದು.
7. ಸದರಿ ಕೆಲಸವು ಎಂಬ್ಯಾಕ್ ಮೆಂಟ್/ಕಾಂಕ್ರೀಟ್/ಡಾಂಬರೀಕರಣ-ಬಿಎಂ-ಬಿಸಿ /WMM-WBM ಕಾಮಗಾರಿಗಳಾಗಿದ್ದಲ್ಲಿ, MORT & H ಅನ್ವಯ ಗುಣಮಟ್ಟ ಪರೀಕ್ಷೆ ಹಾಗೂ Core-cut ಪರೀಕ್ಷೆಗಳನ್ನು ಕೈಗೊಂಡು ಫಲಿತಾಂಶವನ್ನು ಪಡೆದುಕೊಳ್ಳುವುದು.

ಜಂಟಿ ಆಯುಕ್ತರು, 7/1/13
ಯಲಹಂಕ ವಲಯ
ಬಿ.ಬಿ.ಎಂ.ಪಿ ಬೆಂಗಳೂರು-92

ಪ್ರತಿಯನ್ನು:

1. ಮುಖ್ಯ ಅಭಿಯಂತರರು, ಯಲಹಂಕ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಮಾಹಿತಿಗಾಗಿ..
2. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ, ಸೂಕ್ತ ಕ್ರಮಕ್ಕಾಗಿ.
3. ಸಹಾಯಕ ಹಣಕಾಸು ನಿಯಂತ್ರಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಮಾಹಿತಿಗಾಗಿ.
4. ಮುಖ್ಯ ಲೇಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಮಾಹಿತಿಗಾಗಿ.